೧೨-೫೦ ಪಿ.ಎಂ.

ಶಾಸನ ರಚನಾ ಕಾರ್ಯಕಲಾಪಗಳು

The Karnataka State Civil Services (Repeal) Bill 1990

Motion for Consideration

† ಶ್ರೀ ಎಂ. ವೀರಪ್ಪಮೊಯ್ಲಿ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು),—ಮಾನ್ಯ ಅಧ್ಯಕ್ಷರೆ, ಈ ಒಂದು ಮಸೂದೆ.....

ಶ್ರೀ ಎಸ್. ಹೆಚ್. ಕೌಜಲಗಿ.—ಮಧ್ಯಾಹ್ನ ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಈಗ ಇದನ್ನು ವಿವರಿಸುತ್ತೇನೆ. ಮಧ್ಯಾಹ್ನವೇ ತೆಗೆದುಕೊಳ್ಳೋಣ. ಏಕೆಂದರೆ ಇನ್ನೂ ೧ ಗಂಟೆ ಆಗಿಲ್ಲ. ಇದು ಬಹಳ ಸರಳವಾದ ಮಸೂದೆ. ಯಾವುದೇ ವಿವಾದಾಸ್ಪದವಾದ ಮಸೂದೆ ಏನೂ ಅಲ್ಲ. ಬಹುಶಃ ಇದು ಮಸೂದೆ ಆಗಬೇಕೆಂದು ಹೇಳಿದ್ದಿದ್ದರೆ ವಿವಾದಾಸ್ಪದವೇ ಆಗುತ್ತಿತ್ತು. ರಾಜ್ಯಾಂಗದ ಆರ್ಟಿಕಲ್ ೩೧೯ರ ಪ್ರಕಾರ....."Governor of a State or such person as he may direct in the case of services and posts in connection with the affairs of the State, to make rules regulating the recruitment, and the conditions of service to persons appointed, to such services and posts until provisions in that behalf made by or under an Act of the appropriate Legislature. ಇದನ್ನು ರೆಗ್ಯುಲೇಟ್ ಮಾಡಲಿಕ್ಕೆ ಸಾಧ್ಯವಿದೆ. ಇದರ ಹಿನ್ನೆಲೆಯಲ್ಲಿ ೩೧೯ನೇ ಆರ್ಟಿಕಲ್ ಪ್ರಕಾರ ಸರ್ಕಾರಕ್ಕೆ ನೇಮಕಾತಿ ಅಥವಾ ಶಿಸ್ತುಕ್ರಮ ಅಥವಾ ಆಯಾಯ ಸರ್ವಿಸ್ ಕಂಡಿಷನ್ಸ್‌ನ್ನು ನಿಯಂತ್ರಣ ಮಾಡತಕ್ಕ ಕಾರ್ಯಕ್ರಮಗಳನ್ನು ಕಳೆದ ೪೦ ವರ್ಷಗಳಿಂದ ಮಾಡಿಕೊಂಡು ಬಂದಿದೆ. ಬಹುಶಃ ಇದಕ್ಕೆ ಯಾವುದೇ ಆತಂಕ ಇಲ್ಲ. ಹೈಕೋರ್ಟ್‌ನಲ್ಲಾಗಲಿ, ಸುಪ್ರೀಂ ಕೋರ್ಟಿನಲ್ಲಾಗಲಿ ಇಲ್ಲಾಗಲಿ ಇವತ್ತಿನವರೆಗೂ ಆರ್ಟಿಕಲ್ ೩೧೯ರ ಪ್ರಕಾರ ನೇರವಾಗಿ ನೇಮಕಾತಿ ನಿಯಮಗಳನ್ನು ಅಥವಾ ಸೇವಾ ನಿಯಮಗಳನ್ನು ಅಥವಾ ಶಿಸ್ತಿನ ನಿಯಮಗಳನ್ನು ಅಳವಡಿಸಿಕೊಂಡು ಮಾಡತಕ್ಕಂಥ ಯಾವ ನಿಯಮಗಳನ್ನೂ ಹೆಚ್ಚಿಗೆ ಸ್ಟೈಕ್‌ಡೌನ್ ಮಾಡಿಲ್ಲ ಆಯಾಯ ಸಂದರ್ಭಕ್ಕೆ ಸರಿಯಾಗಿ ಸರ್ಕಾರ ಸ್ಪಂದಿಸತಕ್ಕ ಅವಕಾಶ ಆರ್ಟಿಕಲ್ ೩೧೯ ರಲ್ಲಿ ಇದೆ. ಆದರೆ ೧೯೭೮ರಲ್ಲಿ ಆಗಿನ ಸರ್ಕಾರ ವಿಚಾರ ಮಾಡಿ ಇದಕ್ಕೆ ಒಂದು ವಿಶಿಷ್ಟವಾದ ಮಸೂದೆಯನ್ನು ತಂದಿದ್ದು ಅದನ್ನು ಈ ಸದನ ಮತ್ತು ಆ ಸದನ ಎರಡೂ ಸದನಗಳು ಮುಂಜೂರು ಮಾಡಿ ಅದನ್ನು ಮಾನ್ಯ ರಾಜ್ಯಪಾಲರ ಅಂಕಿತಕ್ಕೆ ಕಳಿಸಿ, ಅನಂತರ ಮಾನ್ಯ ರಾಷ್ಟ್ರಾಧ್ಯಕ್ಷರ ಅಂಕಿತಕ್ಕೆ ಕಳುಹಿಸಿದ ಮೇಲೆ ಇದು ಅವರಿಬ್ಬರ ಅಂಕಿತಗಳನ್ನೂ ಪಡೆದು ಸರ್ಕಾರಕ್ಕೆ ಬಂತು. ಸರ್ಕಾರಕ್ಕೆ ಬಂದಮೇಲೆ ಅದರಲ್ಲಿ ೨ ಲೋಪದೋಷಗಳಿದ್ದುವು. ೧೯೭೮ರಲ್ಲಿ ಅಂಗೀಕಾರವಾಗಿ, ಯಾವ ಮಸೂದೆಗೆ ಮಾನ್ಯ ರಾಷ್ಟ್ರಾಧ್ಯಕ್ಷರ ಅಂಕಿತ ಬಿದ್ದಿದೆ. ಅದು ಹೈಕೋರ್ಟ್‌ನಲ್ಲಿ ಏನು ಸೇವಾ ನಿಯಮ ಇದೆ ಅದಕ್ಕೆ ಸಂಬಂಧಪಟ್ಟಿದ್ದು. ಇನ್ನು ಎರಡನೆಯದಾಗಿ ನಾವು ಶಾಸಕಾಂಗಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಅವರ ಸೇವಾ ನಿಯಮ, ಅವರ ನೇಮಕಾತಿಗೆ ಸಂಬಂಧಪಟ್ಟಿದ್ದರೂ ಕೂಡ ಇದರಲ್ಲಿ ಸೇರಿದೆ. This would have become an encroachment as far as the autonomy of the High Court and also the autonomy of the Legislature is concerned. ಇದು ಆಗತಕ್ಕದ್ದು ಸರಿಯಲ್ಲವೆಂದು ಪುನಃ ಆಗಿನ ಸರ್ಕಾರ ಆರ್ಡಿನೆನ್ಸ್ ಮುಖಾಂತರ ಹೈಕೋರ್ಟ್ ಮತ್ತು ಲೆಜಿಸ್ಲೇಚರ್ ಜ್ಯೂರಿಸ್‌ಡಿಕ್ಷನ್‌ನ್ನು ಎರಡನ್ನೂ ಕೂಡ ಈ ಮಸೂದೆಯ ಕಕ್ಷೆಯಿಂದ ತೆಗೆಯಬೇಕೆಂದು ಆಲೋಚನೆ ಮಾಡಿ ಇನ್ನೇನು ಆರ್ಡಿನೆನ್ಸನ್ನು ಇಷ್ಯೂ ಮಾಡತಕ್ಕ ಪರಿಸ್ಥಿತಿಯಲ್ಲಿ ಅದು ಬೇಡ ಎಂಬ ಅಭಿಪ್ರಾಯಕ್ಕೆ ಬಂತು. ೧೯೭೮ರಲ್ಲಿ ರಾಷ್ಟ್ರಾಧ್ಯಕ್ಷರ ಅಂಕಿತವನ್ನು ಪಡೆದಂಥ ಈ ಮಸೂದೆ ಪಬ್ಲಿಷ್ ಆಗಲಿಲ್ಲ, ಜಾರಿಗೆ ಬರಲಿಲ್ಲ. ಅದೇ ಪ್ರಕಾರ ಆರ್ಡಿನೆನ್ಸ್‌ನ್ನು ಮಾನ್ಯ ರಾಜ್ಯಪಾಲರು ಇಷ್ಯೂ ಮಾಡತಕ್ಕ ಸಂದರ್ಭದಲ್ಲಿ ಇದರ ಅವಶ್ಯಕತೆ ಇಲ್ಲವೆಂದು ಸರ್ಕಾರ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆ ಆರ್ಡಿನೆನ್ಸ್‌ನ್ನು ವಾಪಸು ತೆಗೆದುಕೊಂಡಿತು. ಈಗ ೧೯೭೮ರ ಮಸೂದೆಯೂ ಬೇಡ, ಆರ್ಡಿನೆನ್ಸ್ ಇಷ್ಟೂ ಮಾಡಬೇಕೆಂದು ಎಕ್ಸ್‌ಕ್ಲೂಡಿಂಗ್ ಪ್ರಿಜುಡಿಸ್ ಏನಿದೆ ಅದೂ ಬೇಡ. ಆರ್ಟಿಕಲ್ ೩೭೫ರ ಪ್ರಕಾರ ನೇಮಾ ನಿಯಮಗಳನ್ನು ಹೈಕೋರ್ಟ್ ಆಗಲಿ ಅಥವಾ ಲೆಜಿಸ್ಲೇಚರ್ ಆಗಲಿ, ಸರ್ಕಾರವಾಗಲಿ ನಿಯಂತ್ರಿಸಲು ಸಾಧ್ಯವಿದೆ. ಆದ್ದರಿಂದ ಇಂಥ ಒಂದು ಮಸೂದೆಯನ್ನು ತಂದು ಬೇರೆ ಬೇರೆ ತಾಪತ್ರಯ, ತೊಂದರೆ. ಕಾನೂನಿನ ಎಡರುತೊಡರು ಬರುವುದರ ಬದಲು ಇದ್ದಂಥ ಪರಿಸ್ಥಿತಿಯನ್ನೇ ಸುಧಾರಿಸಲಿಕ್ಕೆ ಆರ್ಟಿಕಲ್ ೩೭೫ ಸಾಕಷ್ಟು ಶಕ್ತಿ ಕೊಡುತ್ತದೆ. ಸಾಕಷ್ಟು ಬಲ ಇದೆ. ಆದುದರಿಂದ ಎರಡು ಸದನಗಳು ೧೯೭೮ರ ಮಸೂದೆಯನ್ನು ಪಾಸ್ ಮಾಡಿದ ಕಾರಣ, ಪಬ್ಲಿಷ್ ಆಗದಿದ್ದರೂ ಕೂಡ ಅದನ್ನು ತೆಗೆಯಬೇಕಾದರೆ ಈ ಸದನ ಮತ್ತು ಆ ಸದನ ಹಿಂದೆ ತೆಗೆದುಕೊಳ್ಳಬೇಕು. ಆದುದರಿಂದ ಇದನ್ನು ರಿಪಿಲ್ ಮಾಡಬೇಕೆಂದು ೧೯೭೮ರ ಮಸೂದೆಯನ್ನು ತಂದಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ವಿವಾದ ಕೂಡ ಇಲ್ಲ. ಈಗಿನ ಯಥಾಸ್ಥಿತಿ ಮುಂದುವರಿಯುತ್ತದೆ, ಅಷ್ಟೇ ವಿಚಾರ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಇದನ್ನು ಡಿಸ್‌ಕಸ್ ಮಾಡಲು ಅವಕಾಶ ವಿಲ್ಲವೇ.

SRI M. VEERAPPA MOILY.—There is no controversy. Nothing new.

SRI H. EKANTHAIAH.—If there is no controversy, Where was the necessity to bring an ordinance then?

SRI M. VEERAPPA MOILY.—After all it is a question of wisdom at a particuiar time. ಆಗ ಆ ಮಸೂದೆ ಅಗತ್ಯವಿದೆಯೆಂದು ತಂದರು. ಆದರೆ Now all the administrative experts and we feel that it is not necessary.

ಶ್ರೀ ಹೆಚ್. ಏಕಾಂತಯ್ಯ.—೧೯೭೮ನೇ ಇಸವಿಯಲ್ಲಿ ಯಾವ ಕಾರಣಕ್ಕೋಸ್ಕರ ಈ ಮಸೂದೆಯನ್ನು ತಂದು ಕಾನೂನನ್ನು ಮಾಡಿದರು?

ಶ್ರೀ ಎಂ. ವೀರಪ್ಪಮೊಯಿಲಿ.—ಆರ್ಟಿಕಲ್ ೩೭೫ರ ಆಧಾರದ ಮೇಲೆ ನಿಯಮಗಳನ್ನು ಮಾಡಬಹುದು. ರೂಲ್ಸ್ ಮಾಡಬಹುದು, ಅದರಿಂದಲೂ ನಿಯಂತ್ರಣ ಮಾಡಬಹುದು. ಆದರೆ ಬರೀ ರೂಲ್ಸ್ ಸಾಕಾಗುವುದಿಲ್ಲ. ಆಗ ಕಾನೂನು ಪ್ರಕಾರ ಮಾಡೋಣ, ಆ ಆಕ್ಟ್ ಪ್ರಕಾರ ಮಾಡೋಣವೆಂದು ಯೋಚಿಸಿದರು. We feel and also our administrative experts, even the previous Chief Secretary Sri T. R. Satishchandran himself wrote down in the file, that it is not necessary and sometimes it might become more difficult than resolving than problem. ಆದ್ದರಿಂದ ಒಂದು ವಿಚಾರವನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ಎಷ್ಟು ಕಾನೂನು ಕಡಿಮೆ ಇದ್ದರೆ ಅಷ್ಟೂ ಒಳ್ಳೆಯದು. There will be less red-tapism, less interference, less intervention. ಆದ್ದರಿಂದ ಒಂದು ಕಾನೂನು ಕಡಿಮೆ ಮಾಡೋಣ, ಬಿಟ್ಟು ಬಿಡೋಣವೆಂದರೆ, rather we should welcome it than objecting it. ಆದ್ದರಿಂದ ಇದನ್ನು ದಯವಿಟ್ಟು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಏನೋ ತುಂಬ ಪ್ರಮುಖವಾದ ವಿಷಯ ಇದೆ, ಅದಕ್ಕೆ ನಮ್ಮ ಒಪ್ಪಿಗೆ ಕೊಡಬಾರದು ಎನ್ನುವ ಪ್ರಶ್ನೆ ಇಲ್ಲ. ಹಿಂದೆ ಸರ್ಕಾರ ಒಂದು ಸಾರಿ ಕಾನೂನನ್ನು ತಂದು ಈಗ ಅದನ್ನು ವಾಪಸ್ ತೆಗೆದುಕೊಂಡು ಬದಲಾವಣೆ ಮಾಡುವಂತಹ ಸಂದರ್ಭ ಬಂದಾಗ ಇದರ ಬಗ್ಗೆ ಚರ್ಚೆ ಮಾಡಿ ಸಾಧಕ ಬಾಧಕಗಳನ್ನು ನೋಡಿ ಮಾಡೋಣ. ನಾವು ಆಕಸ್ಮಾತ್ ಒಪ್ಪದಿದ್ದರೆ ನಿಮಗೆ ಬಹುಮತ ಇದೆ, ಮಾಡಿಕೊಳ್ಳುತ್ತೀರಿ. ಅದರಲ್ಲೇನಿದೆ.

ಶ್ರೀ ಎಸ್. ಹೆಚ್. ಕೌಜಲಗಿ — ನಮ್ಮದೇನು ತಕರಾರು ಇಲ್ಲ. ಏನು ಕೊಟ್ಟಿದ್ದಾರೆ ಅದನ್ನು ಓದಿಕೊಂಡು ಪಾಸ್ ಮಾಡುತ್ತೇವೆ. ಸ್ವಲ್ಪ ದಯವಿಟ್ಟು ಅದರ ಸಾಧಕಭಾದಕಗಳನ್ನು ನೋಡಿ ಅನುಕೂಲವಿದ್ದರೆ ಒಪ್ಪಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಕಾನೂನು ಸಚಿವರು ದಯವಿಟ್ಟು ಬಿಲ್ ಕಾಪಿಯನ್ನು ಕಳುಹಿಸಿಕೊಡಬೇಕು. ಅದು ಏನಿದೆ ಎಂದು ನೋಡಬೇಕು. ಆತುರದಿಂದ ಕಾನೂನನ್ನು ಮಾಡುವುದು ಬೇಡ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ತರಾತುರಿಯಿಂದ ಇದನ್ನು ಪಾಸ್ ಮಾಡಿಕೊಂಡು ಹೋಗಬೇಕು ಎಂಬ ಇರಾದೆ ಏನಿಲ್ಲ. ನಾವು ಸದನಕ್ಕೆ ವಿಷಯ ತಂದಿದ್ದೇವೆ. ಕಾಪಿ ಬಾರದಿದ್ದರೆ ಮುತ್ತೆ ಸಪ್ಲೆ ಮಾಡುತ್ತೇವೆ. ಹಾಗಾದರೆ, ಚರ್ಚೆ ಮಾಡಲೇಬೇಕೆಂದರೆ ನಾಳೆ ಮಾಡಲಿ. ಇವತ್ತು ಮಧ್ಯಾಹ್ನದ ಮೇಲೆ ಉತ್ತರ ತೆಗೆದುಕೊಳ್ಳಿ. ನಾಳೆ ಇದರ ಬಗ್ಗೆ ಚರ್ಚೆ ಮಾಡಲಿ.

ಚೇರ್‌ಮನ್.— ಈಗ ಈ ಸಭೆಯನ್ನು ೨ ಗಂಟೆಗೆ ಮುಂದೂಡಲಾಗಿದೆ.

(ಸದನವು ಒಂದು ಗಂಟೆಗೆ ಎದ್ದು ಮತ್ತೆ ಎರಡು ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮತ್ತೆ ೨–೦೫ಕ್ಕೆ ಸಮಾವೇಶಗೊಂಡಿತು. ಶ್ರೀಮತಿನಾಗಮ್ಮ ಕೇಶವಮೂರ್ತಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಹಣ ಕಾಸಿನ ಸಚಿವರಿಂದ ಉತ್ತರ

† ಶ್ರೀ ಎಂ. ವಿ. ರಾಜಶೇಖರಮೂರ್ತಿ (ಮಾನ್ಯ ಹಣಕಾಸು ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಚರ್ಚೆಯಲ್ಲಿ ಭಾಗವಹಿಸಿದಂತಹ ಅನೇಕ ಸನ್ಮಾನ್ಯ ಸದಸ್ಯರು ಆರ್ಥಿಕ ಇಲಾಖೆಯು ರಾಜ್ಯದ ಬೊಕ್ಕಸಕ್ಕೆ ಹಣವನ್ನು ಕೂಡಿಸುವಲ್ಲಿ ಮಾಡಿದ ಸಾಧನೆಯ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಆ ರೀತಿ ಒಳ್ಳೆಯ ಮಾತನಾಡತಕ್ಕಂಥದ್ದು ಅವರ ಸಜ್ಜನಿಕೆಯ ಸಂಕೇತ ಅಥವಾ ಸುಸಂಕ್ಕೃತಿಯ ಸುಲಕ್ಷಣ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಒಳ್ಳೆಯ ಮಾತು ನನ್ನೊಬನಿಗೆ ಸಲ್ಲತಕ್ಕಂಥದ್ದಲ್ಲ. ನನ್ನ ಇಲಾಖೆಯೊಳಗೆ ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಕೆಲಸ ಮಾಡಿದಂಥ ಅಧಿಕಾರವರ್ಗದ ಎಲ್ಲರಿಗೂ ಕೂಡಾ ಈ ಒಂದು ಒಳ್ಳೆಯ ಮಾತು ಸಲ್ಲತಕ್ಕಂಥದ್ದು. ಸನ್ಮಾನ್ಯ ಸದಸ್ಯರು ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈ ಬಗ್ಗೆ ಮಾತನಾಡುವುದಕ್ಕಿಂತ ಮುಂಚೆ ನಾನು ಏನು ಹೇಳಬೇಕು ಎಂದು ಇದ್ದೇನೆ, ಅದನ್ನು ಎರಡು ಭಾಗವಾಗಿ ಮಾಡಿಕೊಳ್ಳುತ್ತೇನೆ. ಮೊದಲನೆಯದು ಹಣಕಾಸಿನ ಪರಿಸ್ಥಿತಿಯೇನು ? ಎನ್ನುವುದು ಜನರಲ್ ಆಗಿ ಆಡತಕ್ಕಂಥ ಮಾತು. ಇನ್ನೊಂದು ಎರಡನೇ ಭಾಗ ಎಂದರೆ ಟೀಕೆ ಟಿಪ್ಪಣಿ ಮತ್ತು ಸಲಹೆಗಳಿಗೆ ಉತ್ತರವನ್ನು ಕೊಡತಕ್ಕಂಥದ್ದು. ಈಗ ಮೊದಲನೆಯದು ಸಾಮಾನ್ಯ ಹಣಕಾಸಿನ ಪರಿಸ್ಥಿತಿ. ಇದು ೧೯೮೯ರ ಏಪ್ರಿಲ್‌ನಲ್ಲಿ ಯಾವ ರೀತಿ ಇತ್ತು, ಇದು ಯಾವ ರೀತಿ ಇದೆ? ಇದರ ಬಗ್ಗೆ ನಾನು ಹೇಳುತ್ತೇನೆ. ನಿಮಗೆ ಗೊತ್ತಿರುವ ಹಾಗೆ ೧೯೮೯ರ ಏಪ್ರಿಲ್‌ನಲ್ಲಿ There was mismanagement of the finances of the State. ಆದರ ಪರಿಣಾಮವಾಗಿ ಟ್ರೆಜರಿ ಖಾಲಿ ಆಯಿತು. ಸ್ಯಾಲರಿ ಪ್ರತಿ ತಿಂಗಳು ಕ್ರಮಬದ್ಧವಾಗಿ ಅಧಿಕಾರಿಗಳಿಗೆ ತಲುಪುತ್ತಿರಲ್ಲಿಲ್ಲ. ಕಂಟ್ರಾಕ್ಟರ್ಸ್ ಬಿಲ್ ಸಕಾಲದಲ್ಲಿ ಪಾವತಿ ಆಗುತ್ತಿರಲ್ಲಿಲ್ಲ ಸುಮಾರು ೧೫೦ ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಉಳಿದಿದ್ದುವು. ಮತ್ತು ಟ್ರೆಜರಿಯ ಮೇಲೆ ಅನೇಕ ವಿಧವಾದ ಕಂಟ್ರೋಲ್‌ಗಳನ್ನು ಕೂಡಾ ಹಾಕಿದ್ದರು. ಇದರ ಪರಿಣಾಮವಾಗಿ ಕೆಲಸಕಾರ್ಯಗಳು ಸ್ಥಗಿತವಾಗಿದುವು. ಅಡಳಿತ ಯಂತ್ರ ಮಲಗಿತ್ತು. ಏಂತಲೇ ಹೇಳಬಹುದು, ಜನಗಳಲ್ಲಿ ತುಂಬಾ ನಿರಾಶೆ ಇತ್ತು. ಆ ನಿರಾಶೆಯ ಫಲ ಇವತ್ತು ನಾವು ಆ ಜಾಗದಿಂದ ಈ ಜಾಗಕ್ಕೆ ಬಂದಿದ್ದೇವೆ. ಇಂದು ಪರಿಸ್ಥಿತಿ ಬಹಳ ಮಟ್ಟಿಗೆ ಬದಲಾವಣೆಯಾಗಿದೆ ಅದೇ ಆರ್ಥಿಕ ಪರಿಸ್ಥಿತಿ ಇಲ್ಲ ಇವತ್ತು ಆರ್ಥಿಕ ಪರಿಸ್ಥಿತಿ ಬಹಳ

† ಈ ಚಿಪ್ಪೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.